# ವಾರ್ಷಿಕ ವರದಿ
# 2015–16



ॐ

# ಹಿಂದು ಸೇವಾ ಪ್ರತಿಷ್ಠಾನ

## ವಾರ್ಷಿಕ ವರದಿ 2015–16

**ಹಿಂದು ಸೇವಾ ಪ್ರತಿಷ್ಠಾನ**
ಅಜಿತಶ್ರೀ, 8/28, ಬಸವನಗುಡಿ ರಸ್ತೆ, ಬೆಂಗಳೂರು - 560 004
ದೂರವಾಣಿ: 080-26608926, 94803 16628, 94803 16629
hinduseva@gmail.com
www.hinduseva.org

# ಪ್ರಕಲ್ಪಗಳು

ಸೇವಾಮಿತ್ರ

ಶಿಶು ಶಿಕ್ಷಣ ಮತ್ತು ಸಂಶೋಧನೆ

ಸೇವಾಕಿರಣ

ಯೋಗಭಾರತಿ

ನೆಲೆ

ನೆಲೆ–ಸ್ವಾವಲಂಬನ

ನ್ಯೂನತೆಯುಳ್ಳ ಮಕ್ಕಳ ಸೇವೆ

ಪ್ರಸನ್ನ ಆಪ್ತಸಲಹಾಕೇಂದ್ರ

ಮಕ್ಕಳ ಮಾರ್ಗದರ್ಶೀ ಕೇಂದ್ರ

ಆಶ್ರಯ – ಕನ್ಯಪ್ಪಾಡಿ

ಕಾವೇರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್

ಸೇವಾವ್ರತಿ

# ಅರಿಕೆ

2015-2016ನೇ ಸಾಲಿನ ಹಿಂದು ಸೇವಾ ಪ್ರತಿಷ್ಠಾನದ ಅನ್ಯಾನ್ಯ ಚಟುವಟಿಕೆಗಳ ವರದಿಯನ್ನು ನಿಮ್ಮ ಮುಂದೆ ಸಾದರಪಡಿಸುತ್ತಿದ್ದೇವೆ.

ಈ ಒಂದು ವರ್ಷದಲ್ಲಿ ಹಿಂದು ಸೇವಾ ಪ್ರತಿಷ್ಠಾನದ ಕಾರ್ಯ ವಿಸ್ತಾರವಾಗಿರುವುದರ ಜೊತೆಯಲ್ಲಿ ಚಟುವಟಿಕೆಗಳಿಗೆ ಅನೇಕ ಹೊಸ ಮುಖಗಳೂ ಸೇರಿಕೊಂಡಿರುವುದು ಒಂದು ವಿಶೇಷ. "ಸೇವಾ ಕಿರಣ" ಕೆಲವು ವರ್ಷಗಳಿಂದ ಸೇವಾ ಬಸ್ತಿಗಳಲ್ಲಿನ ಕಲಿಕಾ ಕೇಂದ್ರಕ್ಕೆ ಸೀಮಿತವಾಗಿದ್ದು ಈ ಶ್ರೀರಮಣನ್ ದಂಪತಿಗಳ ಪರಿಶ್ರಮದ ಕಾರಣದಿಂದಾಗಿ ಆರೋಗ್ಯ, ಸ್ವಚ್ಛತೆ, ವೃತ್ತಿ ತರಬೇತಿ, ಸೇವಾ ಬಸ್ತಿಗಳಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಇತ್ಯಾದಿ ಕ್ಷೇತ್ರಗಳಿಗೆ ಕಾಲಿರಿಸಿರುವುದನ್ನು ಆ ವಿಭಾಗದ ವರದಿಯಲ್ಲಿ ಕಾಣಬಹುದು. ಸೇವಾ ಕಿರಣದ ಈ ಕಾರ್ಯ ಕಾಶಿ ಹಾಗೂ ತಮಿಳುನಾಡಿನ ಹೊಸೂರಿಗೂ ಬೆಳೆಯುತ್ತಿರುವುದು ವಿಶೇಷ. ಪ್ರಶಿಕ್ಷಣ ವರ್ಗಗಳು ಕಳೆದ ವರ್ಷವಿಡೀ ಪ್ರತಿಷ್ಠಾನದ ಕಡೆಯಿಂದ ನಡೆದಿವೆ. ವರ್ಷಾರಂಭದಲ್ಲಿ ಬಾಲಕಲ್ಯಾಣ ಕೇಂದ್ರಗಳ ಕಾರ್ಯಕರ್ತರಿಗೆ ಅಭ್ಯಾಸವರ್ಗ, ಪ್ರಾಂತಮಟ್ಟದಲ್ಲಿ ಯೋಗಶಿಕ್ಷಕಿಯರಿಗೆ ಅಭ್ಯಾಸ ವರ್ಗ, ವಿಶೇಷ ಮಕ್ಕಳ ಶಾಲೆಯ ಅಧ್ಯಾಪಕರು ಹಾಗೂ ಸಿಬ್ಬಂದಿ ವರ್ಗಗಳಿಗೆ ಅಭ್ಯಾಸ ವರ್ಗ, ವ್ಯಕ್ತಿತ್ವ ವಿಕಾಸದ ಕಾರ್ಯಕ್ರಮಗಳನ್ನು ನಡೆಸಬೇಕಾದವರಿಗೆ ತರಬೇತಿ ವರ್ಗಗಳು, ವರ್ಷದಲ್ಲಿ ಎರಡು ಬಾರಿ ಸೇವಾ ಶಿಕ್ಷಣ ವರ್ಗಗಳು, ಹೊಸದಾಗಿ ಹೊರಟ ಸೇವಾವ್ರತಿಗಳಿಗೆ ನೈಪುಣ್ಯ ವರ್ಗಗಳು ಇತ್ಯಾದಿ ನಿರಂತರವಾಗಿ ನಡೆದಿವೆ.

ಸೇವಾ ಮಿತ್ರ ಯೋಜನೆ ಈಗ 6 ತಾಲ್ಲೂಕುಗಳಿಗೆ ವಿಸ್ತರಿಸಿರುವುದಲ್ಲದೆ ಆಯಾ ತಾಲ್ಲೂಕುಗಳಲ್ಲಿ ಸಣ್ಣ ಸಣ್ಣ ಗುಂಪುಗಳಲ್ಲಿ ಬಾಲಗೋಕುಲ ನಡೆಸುವವರಿಗೆ, ಮಾತೃಮಂಡಳಿ ನಡೆಸುವವರಿಗೆ, ಮನೆಮದ್ದಿನ ಕುರಿತಾಗಿ ನಿರಂತರವಾಗಿ ವರ್ಗಗಳು ನಡೆಯುತ್ತಿವೆ. ಸೇವಾ ಮಿತ್ರ ಚಟುವಟಿಕೆ ನಡೆಯುತ್ತಿರುವ ತಾಲ್ಲೂಕುಗಳಿಂದ ಹೊಸದಾಗಿ ಸೇವಾವ್ರತಿಗಳು ಬರುತ್ತಿರುವುದೂ ಇನ್ನೊಂದು ಉಪಲಬ್ಧಿ.

ಕಳೆದ ವರ್ಷ ಸಮಗ್ರ ಶಿಶುಶಿಕ್ಷಣಕ್ಕೆ ಸಂಬಂಧಿಸಿದಂತೆ ಶಿಕ್ಷಕಿಯರಿಗೆ, ವ್ಯವಸ್ಥಾಪಕರಿಗೆ, ಪಾಲಕರಿಗೂ ಅಭ್ಯಾಸ ವರ್ಗಗಳು ನಡೆದಿದ್ದರಿಂದ ಎಲ್ಲರಿಗೂ ಅದರ ಬಗ್ಗೆ ಆಸಕ್ತಿ ಹೆಚ್ಚುತ್ತಿರುವುದು ಅನುಭವ.

ವಿಶ್ವ ಯೋಗದಿನ, ಪರಿಸರ ದಿನ, ರಕ್ಷಾ ಬಂಧನ, ಶ್ರೀ ಕೃಷ್ಣ ಜನ್ಮಾಷ್ಟಮಿ, ಭಾರತ ಮಾತಾ ಪೂಜೆ, ಕುಟುಂಬ ಪ್ರಬೋಧನದ ಕಾರ್ಯಕ್ರಮ, ದೀಪಪೂಜೆ, ಇತ್ಯಾದಿ ಕಾರ್ಯಕ್ರಮಗಳು ಹೆಚ್ಚಿನ ಕಡೆಗಳಲ್ಲಿ ನಡೆದಿವೆ.

ಕಾಸರಗೋಡು ತಾಲ್ಲೂಕಿನ ಕನ್ಯಪ್ಪಾಡಿಯಲ್ಲಿರುವ 'ಜನಸೇವಾ ವಿಶ್ವಸ್ಥ ನಿಧಿ' ಟ್ರಸ್ಟಿನ 'ಆಶ್ರಯ'ವು ಈಗ ಹಿಂದು ಸೇವಾ ಪ್ರತಿಷ್ಠಾನಕ್ಕೆ ಸೇರಿದ್ದು ಅಲ್ಲಿ ಈಗ ಹಿರಿಯರ ಮನೆಯ ಜೊತೆಯಲ್ಲಿ ಒಂದು ಶಿಶುಮಂದಿರವೂ ಪ್ರಾರಂಭವಾಗಿದೆ.

ಬೆಂಗಳೂರಿನ ಹೆಬ್ಬಾಳದಲ್ಲಿ 'ಚಾಣಕ್ಯ ಭಾರತಿ' ಟ್ರಸ್ಟ್ ಹಾಗೂ ಅದು ನಡೆಸುತ್ತಿದ್ದ ಕಾವೇರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಈಗ ಪ್ರತಿಷ್ಠಾನದ ತೆಕ್ಕೆಗೆ ಬಂದಿದ್ದು ಹೊಸ ಕಟ್ಟಡದಲ್ಲಿ ಶಾಲೆ ನಡೆಯುತ್ತಿದೆ. ಮುಂದಿನ ವರ್ಷ ಅದರ ವರದಿ ಸೇರಲಿದೆ.

ಉಳಿದಂತೆ ಚಟುವಟಿಕೆಗಳ, ವಿಶೇಷತೆಗಳ ವರದಿಗಳನ್ನು ಆಯಾ ವಿಭಾಗದಲ್ಲಿಯೇ ನೋಡುವಿರಿ.

ನಿಮ್ಮ

(ನಿರ್ದೇಶಕ)

5

# ಸೇವಾಮಿತ್ರ

ಗ್ರಾಮಾಂತರ ಪ್ರದೇಶಗಳಲ್ಲಿ ಸೇವಾ ಚಟುವಟಿಕೆಗಳನ್ನು ಸ್ಥಾನೀಯ ಕಾರ್ಯಕರ್ತರ ಸಹಾಯದಿಂದ ವಿಸ್ತರಿಸುವ ಯೋಜನೆ.

ಯೋಜನೆಯ ಸ್ವರೂಪ: ಮಂಡಲಕ್ಕೆ ಒಬ್ಬ ಸೇವಾಮಿತ್ರನಂತೆ ಆಯ್ಕೆ. ಹತ್ತು ದಿನಗಳ ಸೇವಾ ಶಿಕ್ಷಣ ಶಿಬಿರದಲ್ಲಿ ತರಬೇತಿ. ತಿಂಗಳಿಗೊಮ್ಮೆ ಅಭ್ಯಾಸವರ್ಗ. ತಾವು ವಾಸವಾಗಿರುವ ಮಂಡಲಗಳ ಎಲ್ಲ ಗ್ರಾಮಗಳಲ್ಲಿ ಸೇವಾ ಚಟುವಟಿಕೆ ನಡೆಸಬೇಕು.

ಸೇವಾ ಮಿತ್ರ ಯೋಜನೆ ಒಳಗೊಂಡಿರುವ ತಾಲ್ಲೂಕುಗಳು ಶಿರಹಟ್ಟಿ, ಶಿಕಾರಿಪುರ, ತೀರ್ಥಹಳ್ಳಿ, ಶೃಂಗೇರಿ, ಕೊಪ್ಪ, ಚಿಕ್ಕಬಳ್ಳಾಪುರ.



ಮತ್ತಿಕೋಟೆಯಲ್ಲಿ ಮಾತೃಮಂಡಳಿಯ ಅಭ್ಯಾಸ ವರ್ಗ



ಬಾಲಗೋಕುಲದ ಅಭ್ಯಾಸ ವರ್ಗ

ನಡೆಯುತ್ತಿರುವ ಒಟ್ಟು ಚಟುವಟಿಕೆಗಳು.

| **ಚಟುವಟಿಕೆಗಳು** | |
|---|---|
| ಬಾಲಗೋಕುಲ | 239 |
| ಮನೆಪಾಠ | 48 |
| ಜೋಳಿಗೆ ಪುಸ್ತಕಾಲಯ | 39 |
| ಕಿಶೋರ/ಯುವಭಾರತಿ | 12 |
| ಮಾತೃಮಂಡಳಿ | 47 |
| ಭಜನೆ | 22 |
| ಸ್ವಸಹಾಯ ಸಂಘ | 21 |
| ಯೋಗ ಕೇಂದ್ರ | 10 |
| ಹೊಲಿಗೆ ಕೇಂದ್ರ | 1 |
| | 439 |

| **ತಾಲ್ಲೂಕು** | **ಮಂಡಲ** | **ಗ್ರಾಮ** | **ಚಟುವಟಿಕೆ** |
|---|---|---|---|
| ಶಿರಹಟ್ಟಿ | 17 | 39 | 104 |
| ಶಿಕಾರಿಪುರ | 26 | 65 | 145 |
| ತೀರ್ಥಹಳ್ಳಿ | 15 | 61 | 77 |
| ಶೃಂಗೇರಿ | 2 | 5 | 10 |
| ಕೊಪ್ಪ | 5 | 8 | 53 |
| ಚಿಕ್ಕಬಳ್ಳಾಪುರ | 10 | 24 | 49 |
| | | | |
| | | | |
| | | | |
| | 75 | 212 | 439 |



ಮಕ್ಕಳಿಗೆ ಶಾಲಾಚೀಲಗಳ ವಿತರಣೆ

- ಎಲ್ಲ ತಾಲ್ಲೂಕುಗಳಲ್ಲಿಯೂ ಮನೆ ಪಾಠ ಹಾಗೂ ಬಾಲಗೋಕುಲಗಳ ಮಕ್ಕಳಿಗೆ ರಕ್ಷಾಬಂಧನ ಹಾಗೂ ಶ್ರೀ ಕೃಷ್ಣಜನ್ಮಾಷ್ಟಮಿ ಕಾರ್ಯಕ್ರಮಗಳು ನಡೆದಿವೆ.
- ಏಪ್ರಿಲ್ ತಿಂಗಳಿನಲ್ಲಿ ಎಲ್ಲ ತಾಲ್ಲೂಕುಗಳಲ್ಲಿಯೂ ಒಂದೊಂದು ದಿನದ ಬಾಲಸಂಗಮ ಕಾರ್ಯಕ್ರಮಗಳು ನಡೆದಿವೆ. ಪಾಲ್ಗೊಂಡ ಒಟ್ಟು ಬಾಲಕರ ಸಂಖ್ಯೆ ಸುಮಾರು ೯೦೦.
- ಬಾಲಗೋಕುಲ ನಡೆಯುವ ಶಾಲೆಗಳಲ್ಲಿ ವಿಶ್ವಯೋಗ ದಿನ ಹಾಗೂ ಪರಿಸರ ದಿನಗಳನ್ನು ಆಚರಿಸಲಾಯಿತು.
- ಶಿಕಾರಿಪುರದ 4 ಹೈಸ್ಕೂಲುಗಳು ಹಾಗೂ ಶಿರಹಟ್ಟಿಯ ೩ ಹೈಸ್ಕೂಲುಗಳಲ್ಲಿ ವಿದ್ಯಾರ್ಥಿಗಳಿಗಾಗಿ ಜಲಜಾಗೃತಿ ಕಾರ್ಯಕ್ರಮಗಳು ನಡೆದಿವೆ.
- ಶಿರಹಟ್ಟಿ ತಾಲ್ಲೂಕಿನ ೯ ಶಾಲೆಗಳಿಗೆ ಸೇವಾ ಇಂಟರ್ ನ್ಯಾಷನಲ್ ಸಹಾಯದಿಂದ ಕಂಪ್ಯೂಟರ್‌ಗಳನ್ನು ಕೊಡಿಸಲಾಗಿದೆ.
- ಈಸೂರು, ಶಿರಹಟ್ಟಿ ಬೆಳ್ಳಟ್ಟಿ ಹಾಗೂ ಕೊಂಡೇನಹಳ್ಳಿಗಳಲ್ಲಿ ಬಾಲಗೋಕುಲ ನಡೆಸಲು ತರಬೇತಿ ನೀಡಲಾಗಿದೆ.
- ತೀರ್ಥಹಳ್ಳಿ, ಕೋಣಂದೂರು, ತೊಗರ್ಸಿ, ಲಕ್ಷ್ಮೇಶ್ವರ, ಪರೇಸಂದ್ರಗಳಲ್ಲಿ ಮನೆಮದ್ದಿನ ತರಬೇತಿ ನೀಡಲಾಗಿದೆ.

## ಶಿಶುಶಿಕ್ಷಣ ಮತ್ತು ಸಂಶೋಧನಾ ಕೇಂದ್ರ

ಸಮಗ್ರ ಶಿಶು ಶಿಕ್ಷಣ

ಶಿಶುಗಳ ಶಾರೀರಿಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ ಬೆಳವಣಿಗೆಗಳು ಹಾಗೂ

ಶಿಶುಗಳಲ್ಲಿ ಭಾಷೆ, ಗಣಿತ, ವಿಜ್ಞಾನ, ಪರಿಸರ ಇತ್ಯಾದಿ ವಿಷಯಗಳ ಪರಿಚಯ ಮಾಡಿಸಲು ಅಗತ್ಯವಿರುವ ಚಟುವಟಿಕೆಗಳನ್ನು ಆಯಾ ಮಗುವಿಗೆ ನೀಡುವ ಶಿಕ್ಷಣವೇ ಸಮಗ್ರ ಶಿಶು ಶಿಕ್ಷಣ.



ಶಿಶುಶಿಕ್ಷಣ ಶಿಬಿರದಲ್ಲಿ ಶಿಕ್ಷಕಿಯರಿಗೆ ಶಾರೀರಿಕ ಅಭ್ಯಾಸ

**ಇಲ್ಲಿನ ವಿಶೇಷತೆಗಳು**

1) ಮಗುವಿಗೆ ಮನೆಯ ಪರಿಸರದಂತಹ ಪರಿಸರದ ಸೃಷ್ಠಿ
2) ಚಟುವಟಿಕೆಗಳ ಮೂಲಕವೇ ಶಿಕ್ಷಣ.
3) ಅನುಭವದ ಮೂಲಕವೇ ಮಗು ಕಲಿಯುತ್ತದೆ.
4) ಮಗುವಿಗೆ ಕಲಿಯುವ ಇಚ್ಛೆಯುಂಟಾದಾಗ ಮಾತ್ರ ಕಲಿಸಲಾಗುತ್ತದೆ.
5) ಓದಲು, ಬರೆಯಲು ಅಗ್ರಹವಿಲ್ಲ.
6) ಹೋಂ ವರ್ಕ ಮತ್ತು ಪರೀಕ್ಷೆಗಳಿಲ್ಲ.
7) ಪ್ರತಿಮಗುವಿನ ಪ್ರತಿಹಂತದ ಅವಲೋಕನ ಇಲ್ಲಿದೆ.
8) ಮಾತೃಭಾಷೆಯಲ್ಲೇ ಶಿಕ್ಷಣ.

- ✦ ಪ್ರಾಂತ ಟೋಳಿ ವರ್ಷದಲ್ಲಿ 3 ಬಾರಿ ಸೇರುತ್ತದೆ.
- ✦ ಶಿಕ್ಷಕಿಯರಿಗೆ ವರ್ಷದಲ್ಲಿ 2 ಬಾರಿ ಪ್ರಾಂತಸ್ತರದಲ್ಲಿ ಹಾಗೂ ವರ್ಷದಲ್ಲಿ 3 ಬಾರಿ ವಿಭಾಗಸ್ತರದಲ್ಲಿ ಅಭ್ಯಾಸ ವರ್ಗಗಳು.
- ✦ ಶಿಶುಮಂದಿರಗಳ ವ್ಯವಸ್ಥಾಪಕರಿಗೆ ವರ್ಷದಲ್ಲೆರಡು ಬಾರಿ ಅಭ್ಯಾಸ ವರ್ಗಗಳು.
- ✦ ಶಿಶುಗಳ ಪಾಲಕರಿಗೂ ವರ್ಷದಲ್ಲಿ 2 ಬಾರಿ ಅಭ್ಯಾಸವರ್ಗಗಳು.

## ಸೇವಾಕಿರಣ

ಬೆಂಗಳೂರಿನಲ್ಲಿ ಹಿಂದುಳಿದ ವಸತಿಗಳಲ್ಲಿ ವಾರದಲ್ಲಿ ಐದು ದಿನ ದಿನಕ್ಕೆರಡು ಗಂಟೆಗಳ ಕಾಲ ಮನೆಪಾಠ ಹಾಗೂ ಒಂದು ದಿನ ಬಾಲಗೋಕುಲ ಕಾರ್ಯಕ್ರಮಗಳು ನಡೆಯುತ್ತವೆ.



ಕಲಿಕಾ ಕೇಂದ್ರ

| ಮನೆಪಾಠ ನಡೆದ ಸ್ಥಾನಗಳು | ಕೇಂದ್ರಗಳು | ಮಕ್ಕಳು |
|---|---|---|
| 1) ಬಂಗಾರಪ್ಪನಗರ | 9 | 160 |
| 2) ವೀರಭದ್ರನಗರ | 10 | 150 |
| 3) ಜಂಬೂಸವಾರಿ ದಿಣ್ಣೆ | 10 | 180 |
| 4) ಪಿಲ್ಲಗಾನ ಹಳ್ಳಿ | 9 | 190 |
| 5) ಮಾಹಿತಿ ಬಡಾವಣೆ | 9 | 200 |
| 6) ರಾಜೀವಗಾಂಧಿ ನಗರ | 10 | 180 |
| 7) ಚೌಡೇಶ್ವರಿ ನಗರ | 10 | 190 |
| 8) ಲವಕುಶ ನಗರ | 9 | 130 |
| 9) ಸ್ವಾತಂತ್ರ್ಯ ಯೋಧರ ನಗರ | 9 | 150 |
| 10) ಹೆಗ್ಗನ ಹಳ್ಳಿ | 10 | 180 |
| | 95 | 1710 |

**ಸಾಧನೆಗಳು:–**

✦ 10 ಕೇಂದ್ರಗಳಲ್ಲೂ ಶ್ರೀ ಕೃಷ್ಣಜನ್ಮಾಷ್ಟಮಿ ಕಾರ್ಯಕ್ರಮ ನಡೆದಿದ್ದು ಸುಮಾರು 3000 ಮಕ್ಕಳು ಪಾಲ್ಗೊಂಡಿದ್ದರು. ಮುಸಲ್ಮಾನ ಶಿಕ್ಷಕಿಯರು ಮುಸಲ್ಮಾನ ಮಕ್ಕಳಿಗೂ ಕೃಷ್ಣನ ವೇಷಹಾಕಿದರು.



- ✦ 2015ರ ಡಿಸೆಂಬರ್‌ನಲ್ಲಿ ನಡೆದ ಹಿಂದು ಅಧ್ಯಾತ್ಮಿಕ ಹಾಗೂ ಸೇವಾಮೇಳದ ಗೋವಂದನಾ ಕಾರ್ಯಕ್ರಮದಲ್ಲಿ ಮನೆ ಪಾಠಗಳು ನಡೆಯುವ ಕೇಂದ್ರಗಳಿಂದ 250ಕ್ಕೂ ಹೆಚ್ಚು ತಾಯಂದಿರು ಪಾಲ್ಗೊಂಡಿದ್ದರು.
- ✦ 2016ರ ಏಪ್ರಿಲ್‌ನಲ್ಲಿ 6 ಕಡೆ ಬೇಸಿಗೆ ಶಿಬಿರಗಳಲ್ಲಿ 300ಕ್ಕೂ ಹೆಚ್ಚು ಮಕ್ಕಳು ಪಾಲ್ಗೊಂಡಿದ್ದರು.
- ✦ ವೀರಭದ್ರನಗರದಲ್ಲಿ ಸೇವಾಕಿರಣದ ಮಕ್ಕಳು ಸೇವಾಕಿರಣ ಗಣಪನನ್ನು ಕೂರಿಸುತ್ತಾರೆ. 3 ದಿನ ಕಾರ್ಯಕ್ರಮ ನಡೆಯುತ್ತದೆ.
- ✦ ವೀರಭದ್ರನಗರ ಮತ್ತು ಬಂಗಾರಪ್ಪನಗರಗಳಲ್ಲಿ ಸೇವಾಕಿರಣದ ಮಕ್ಕಳೂ ಸೇವಾದಿನದ ಸಂದರ್ಭದಲ್ಲಿ ಮನೆಮನೆಗಳಿಗೆ ಹೋಗಿ ಸೇವಾನಿಧಿ ಸಂಗ್ರಹಿಸಿದ್ದಾರೆ.

## ಸೇವಾಕಿರಣ – ಅನ್ಯ ಚಟುವಟಿಕೆಗಳು

* ಸೇವಾ ಇಂಟರ್ ನ್ಯಾಷನಲ್‌ನ ಸಹಾಯದೊಂದಿಗೆ ಬೆಂಗಳೂರು ನಗರದ ವಿವಿಧ ಸೇವಾಬಸ್ತಿಗಳಲ್ಲಿ 68 ಶೌಚಾಲಯಗಳನ್ನು ನಿರ್ಮಿಸಿಕೊಡಲಾಗಿದೆ. ಬೀದರ್‌ನ ಒಂದು ಶಾಲೆಯಲ್ಲಿ 30 ಶೌಚಾಲಯಗಳನ್ನು ನಿರ್ಮಿಸಿ ಕೊಡಲಾಗಿದೆ. ಬೆಂಗಳೂರಿನಲ್ಲಿ ಶೌಚಾಲಯಗಳಿಗೆ ಸ್ಲಂ ಭೋರ್ಡ್ ಅಧಿಕಾರಿಗಳು ಸ್ಥಳ ಹಾಗೂ ನೀರಿನ ವ್ಯವಸ್ಥೆ ಮಾಡಿದ್ದಾರೆ. ಅದನ್ನು ಸ್ವಚ್ಛವಾಗಿಟ್ಟುಕೊಳ್ಳುವ ಕಾರ್ಯವನ್ನು ಅಲ್ಲಿನ ನಿವಾಸಿಗಳೇ ಮಾಡುತ್ತಿದ್ದಾರೆ.





* ಬೆಂಗಳೂರಿನ ಅರುಣಚೇತನ ವಿಶೇಷ ಮಕ್ಕಳ ಶಾಲೆಯಲ್ಲಿ ಮಹಿಳೆಯರಿಗೆ ಬೇಕಾಗುವ ಸುರಕ್ಷಾ ನ್ಯಾಪ್‌ಕಿನ್ ತಯಾರಿಸುವ ಯಂತ್ರ ಸ್ಥಾಪಿಸಲಾಗಿದ್ದು ತಯಾರಿಕೆ ಪ್ರಾರಂಭವಾಗಿದೆ. ಈ ನ್ಯಾಪ್‌ಕಿನ್‌ಗಳಿಗೆ ಬೇಡಿಕೆ ತುಂಬಾ ಇದೆ.

**ಆರೋಗ್ಯ ಶಿಬಿರಗಳು**

ಸೇವಾಕಿರಣದ ತಂಡ ಅನೇಕ ಕಡೆಗಳಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಿದೆ

| ಸ್ಥಳ | ಫಲಾನುಭವಿಗಳು |
|---|---|
| ಮೈಸೂರು | 10 ಗ್ರಾಮಗಳ 12,000 ಜನರು |
| ಬೆಂಗಳೂರು | ಲಗ್ಗೆರೆ 2500 ಜನರು |



ಆರೋಗ್ಯ ತಪಾಸಣಾ ಕಾರ್ಯಕ್ರಮ

**ವೃತ್ತಿ ಶಿಕ್ಷಣ**

1) ಸ್ಯಾನಿಟರಿ ನ್ಯಾಪಕಿನ್ ನಿರ್ಮಾಣ
2) 150 ಮಹಿಳೆಯರಿಗೆ ಟ್ಯಾಕ್ಸಿ ಡ್ರೈವಿಂಗ್ ಶಿಕ್ಷಣ ಕೊಡಿಸಲಾಗಿದ್ದು ಅವರೆಲ್ಲ ದುಡಿಯುತ್ತಿದ್ದಾರೆ.
3) ಸಾವಯವ ತೋಟ ನಿರ್ಮಾಣಕ್ಕೆ ತರಬೇತಿ ಹಾಗೂ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ.
4) ಹೊಲಿಗೆ ಹಾಗೂ ಕಸೂತಿ ತರಬೇತಿ.
5) ಪ್ಲಂಬಿಂಗ್, ಇಲೆಕ್ಟ್ರಿಸಿಟಿ, ಡಾಟಾಎಂಟ್ರಿ ಇತ್ಯಾದಿ ಕೆಲಸಗಳಿಗೆ ತರಬೇತಿ.

**ಕಾಶಿಯಲ್ಲಿ ಸೇವಾಕಿರಣದ ಕಾರ್ಯ** (ಸೇವಾ ಇಂಟರ್ ನ್ಯಾಷನಲ್ ಸಹಾಯದೊಂದಿಗೆ)

- ✦ 12 ಕೈಮಗ್ಗದ ನೇಕಾರರಿಗೆ ಬೇಕಾದ ಎಲ್ಲ ರೀತಿಯ ಸಹಾಯ ಒದಗಿಸಲಾಗುತ್ತಿದೆ.
- ✦ 5 ಕಲಿಕಾ ಕೇಂದ್ರಗಳನ್ನು ತೆರೆಯಲಾಗಿದೆ.
- ✦ 15 ಜನ ಅಥವಾ ಅದಕ್ಕೂ ಹೆಚ್ಚು ಜನರಿರುವ ಮನೆಗಳಿಗೆ ಶೌಚಾಲಯ ಕೊಡುವ ಯೋಜನೆ ನಡೆದಿದೆ.
- ✦ ನೇಕಾರರು ಸಿದ್ದಪಡಿಸಿದ ಬಟ್ಟೆಗಳಿಗೆ ಮಾರ್ಕೆಟಿಂಗ್ ಯೋಜನೆ
- ✦ ವಯಸ್ಕರಿಗೆ ವೃತ್ತಿ ತರಬೇತಿ ಕೇಂದ್ರಗಳ ನಿರ್ಮಾಣ

# ಯೋಗಭಾರತಿ

ಯೋಗಶ್ರೀ ಮತ್ತು ಪಂಚವಟಿ ಯೋಗಕೇಂದ್ರ.



- ಯೋಗಶ್ರೀಯಲ್ಲಿ ಬೆಳಗ್ಗೆಯಿಂದ ರಾತ್ರಿವರೆಗೆ ೯ ತಂಡಗಳಲ್ಲಿ ಯೋಗಾಭ್ಯಾಸ ನಡೆಯುತ್ತದೆ. ಲಾಭಾನ್ವಿತರ ಸಂಖ್ಯೆ ಸುಮಾರು ೯೦೦.
- ಪ್ರತಿ ತಿಂಗಳು ಹೊಸಬರಿಗಾಗಿ ಒಂದು ತರಗತಿ ಆರಂಭವಾಗುತ್ತದೆ.
- ಯೋಗಶ್ರೀಯಲ್ಲಿ ತೊಡಗಿರುವ ಶಿಕ್ಷಕರು 43, ವ್ಯವಸ್ಥೆಯಲ್ಲಿ ತೊಡಗಿರುವವರು ೮1.
- ಯೋಗ ತರಗತಿಗಳಲ್ಲದೆ ನಡೆಯುವ ಅನ್ಯ ಕಾರ್ಯಕ್ರಮಗಳು.
  1. ಯೋಗ ಶಿಬಿರಗಳು, 2) ಧಾರ್ಮಿಕ ಹಾಗೂ ರಾಷ್ಟ್ರೀಯ ಹಬ್ಬಗಳು, 3) ಪ್ರಶಿಕ್ಷಣ ವರ್ಗಗಳು. 4) ಸ್ನೇಹಮಿಲನ, ಸೂರ್ಯಮಿಲನ 5) ಪ್ರವಾಸಗಳು, 6) ಸ್ವಚ್ಛತಾ ಅಭಿಯಾನ, 7) ಪಂಚವಟಿಯಾತ್ರೆ ಹಾಗೂ ಪಂಚವಟಿಯಲ್ಲಿ ಶಿವರಾತ್ರಿ ಆಚರಣೆ.



ಹಿಂದೂ ಆಧ್ಯಾತ್ಮಿಕ ಹಾಗೂ ಸೇವಾಮೇಳದಲ್ಲಿ ಯೋಗಶ್ರೀ ಮಳಿಗೆ




ವಿಶ್ವ ಯೋಗ ದಿನದ ಅಂಗವಾಗಿ 'ಯೋಗ ನಡಿಗೆ'

**ಯಲಹಂಕ ಯೋಗಕೇಂದ್ರ:** ಯಲಹಂಕ ಉಪನಗರದಲ್ಲಿರುವ ಯೋಗಕೇಂದ್ರದಲ್ಲಿ ಪ್ರತಿದಿನವೂ 3 ತಂಡಗಳಲ್ಲಿ ಸುಮಾರು 60 ಜನರು ಭಾಗವಹಿಸಿ ಲಾಭ ಪಡೆಯುತ್ತಿದ್ದಾರೆ.

## ನೆಲೆ

(ಅವಕಾಶವಂಚಿತ ಮಕ್ಕಳಿಗೆ ಆಶ್ರಯತಾಣ)

ಒಟ್ಟು ನೆಲೆಗಳು 8

| | |
|---|---|
| ಬೆಂಗಳೂರಿನಲ್ಲಿ | – ಲಗ್ಗೆರೆ – ನರೇಂದ್ರ (ಗಂಡುಮಕ್ಕಳಿಗೆ) |
| | – ಉಳ್ಳಾಲು ಉಪನಗರ – ನಿವೇದಿತಾ ನೆಲೆ (ಹೆಣ್ಣುಮಕ್ಕಳಿಗೆ) |
| | – ನಗರ್ತಪೇಟೆ – ಚಂದನ – (ಗಂಡು ಮಕ್ಕಳಿಗೆ) |
| | – ರವೀಂದ್ರನಾಥ ಟಾಗೂರ ನಗರ – ಆಶಾಕಿರಣ (ಹೆಣ್ಣುಮಕ್ಕಳಿಗೆ) |
| | – ಹೆಣ್ಣೂರು ಕ್ರಾಸ್ – ನಮ್ಮ ಮನೆ – (ಗಂಡು ಮಕ್ಕಳಿಗೆ) |
| ಮೈಸೂರು | – ಭೋಗಾದಿ – (ಗಂಡು ಮಕ್ಕಳಿಗೆ) |
| ತುಮಕೂರು | – ದ್ವಾರಕಾ – (ಹೆಣ್ಣುಮಕ್ಕಳಿಗೆ) |
| ಶಿವಮೊಗ್ಗ | – ಕಲ್ಲಹಳ್ಳಿ – ಮಾಧವ (ಗಂಡು, ಹೆಣ್ಣು ಮಕ್ಕಳಿಗೆ) |

2015–16ನೇ ಸಾಲಿನಲ್ಲಿ ನೆಲೆಯ ಸೌಲಭ್ಯ ಪಡೆದ ಮಕ್ಕಳ ಸಂಖ್ಯೆ
ಗಂಡು ಮಕ್ಕಳು 175 + ಹೆಣ್ಣು ಮಕ್ಕಳು 95 = ಒಟ್ಟು 270

**ಸಾಧನೆಗಳು**

1) ನರೇಂದ್ರ ನೆಲೆ ಮಕ್ಕಳು ಕಬ್ಬಡ್ಡಿ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟದಲ್ಲಿ ಭಾಗವಹಿಸಿದ್ದಾರೆ.
2) 'ನಮ್ಮ ಮನೆ' ನೆಲೆಯ ಸುರೇಶ ಶೇ.85 ಅಂಕಗಳೊಂದಿಗೆ ಬಿ.ಕಾಂ. ಪದವಿ ಪಡೆದಿದ್ದಾನೆ.
3) ಆಶಾಕಿರಣ ನೆಲೆಯ ಸ್ಪಂದನ (6ನೇ ತರಗತಿ) ಆದರ್ಶ ವಿದ್ಯಾರ್ಥಿನಿ ಬಹುಮಾನಕ್ಕೆ ಪಾತ್ರಳಾಗಿದ್ದಾಳೆ.
4) ನಿವೇದಿತಾ ನೆಲೆ ಮತ್ತು ಮಾಧವ ನೆಲೆಯ ಮಕ್ಕಳು ಯಕ್ಷಗಾನ ಅಭ್ಯಾಸ ಮಾಡಿದ್ದಾರೆ.
5) ನೆಲೆಯ ವಿದ್ಯಾರ್ಥಿನಿ ಸುಮ್ಯ 92% ಅಂಕಗಳೊಂದಿಗೆ ಪ್ರಥಮ ಪಿ.ಯು. ಮುಗಿಸಿದ್ದಾಳೆ.
6) 2016 ರ ಏಪ್ರಿಲ್‌ನಲ್ಲಿ ನಡೆದ 10ನೇ ತರಗತಿ ಪರೀಕ್ಷೆಯಲ್ಲಿ ನೆಲೆಯ ಒಟ್ಟು 18 ಮಕ್ಕಳು ಪರೀಕ್ಕೆ ಬರೆದಿದ್ದು,ಅವರಲ್ಲಿ 10 ಜನ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಇಬ್ಬರು ಶೇ.75 ಅಂಕಗಳನ್ನು ಪಡೆದಿದ್ದಾರೆ.




ಮಾಧವ ನೆಲೆ ಮಕ್ಕಳ ಯಕ್ಷಗಾನ



ಅಜಿತ ನೆಲೆ ಮಕ್ಕಳಿಂದ ಯೋಗ ಗೋಪುರ

# ನೆಲೆ – ಸ್ವಾವಲಂಬನೆ

ದುರ್ಬಲ ವರ್ಗದವರ ಆರ್ಥಿಕ ಸ್ವಾವಲಂಬನೆಗಾಗಿ ಇರುವ ಕೇಂದ್ರ

ಹೊಲಿಗೆ ಕೇಂದ್ರ : 2007ರಲ್ಲಿ ಪ್ರಾರಂಭವಾದ ಹೊಲಿಗೆ ಕೇಂದ್ರದಲ್ಲಿ ಈವರೆಗೆ 900ಕ್ಕೂ ಹೆಚ್ಚು ಮಹಿಳೆಯರು ತರಬೇತಿ ಪಡೆದಿದ್ದಾರೆ. ಪ್ರತಿದಿನ ಎರಡು ತಂಡಗಳಲ್ಲಿ ತರಬೇತಿ.

450ಕ್ಕೂ ಹೆಚ್ಚು ಮಹಿಳೆಯರು ಹೊಲಿಗೆ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ.

ಹೊಲಿಗೆ ಕೇಂದ್ರದಲ್ಲಿ ನಿತ್ಯ ಪ್ರಾರ್ಥನೆ ಹಾಗೂ ಭಗವದ್ಗೀತಾ ಶ್ಲೋಕಗಳ ಪಠನ ಇದೆ.
ಮಾನಸಿಕ ಆರೋಗ್ಯಕ್ಕಾಗಿ ಸುದರ್ಶನ ಕ್ರಿಯೆಯ ಅಭ್ಯಾಸ ಮಾಡಿಸಲಾಗಿದೆ.
ಮಹಿಳೆಯರೆಲ್ಲ ಒಟ್ಟಾಗಿ ವರ ಮಹಾಲಕ್ಷ್ಮಿ ಪೂಜೆಯನ್ನು ಆಚರಿಸುತ್ತಾರೆ.

ಕಂಪ್ಯೂಟರ್ ತರಬೇತಿ ಕೇಂದ್ರ: ಒಂದು ತಿಂಗಳ ಕಾಲದ ಕಂಪ್ಯೂಟರ್ ಶಿಕ್ಷಣ ಕೊಡಲಾಗುತ್ತಿದ್ದು ಪ್ರತಿ ತಂಡದಲ್ಲಿ ಸುಮಾರು 25ಜನರಿಗೆ ಅವಕಾಶ ಇರುತ್ತದೆ.



ಹೊಲಿಗೆ ತರಬೇತಿ ಕೇಂದ್ರ

# ನ್ಯೂನತೆಗಳುಳ್ಳ ಮಕ್ಕಳ ಸೇವೆಯಲ್ಲಿ

(ಮನೋನಂದನ, ಅರುಣ ಚೇತನ, ಸೇವಾ ಇನ್ ಆಕ್ಷನ್
ಅಜಿತ್‌ಮನೋಚೇತನಾ(ಶಿರಸಿ))

ಬುದ್ಧಿಮಾಂದ್ಯ ಮತ್ತು ಅಂಗವೈಕಲ್ಯಗಳನ್ನು ಹೊಂದಿರುವ ಮಕ್ಕಳಿಗಾಗಿರುವ ವಿಶೇಷ ಶಾಲೆಗಳು ಬೆಂಗಳೂರಿನ ಕೆ. ಆರ್.ರಸ್ತೆಯಲ್ಲಿ ಮನೋನಂದನ ಶಾಲೆ.ಮಲೇಶ್ವರಂ ಆರ್.ಟಿ. ನಗರ ಹಾಗೂ ಲಗ್ಗೆರೆಗಳಲ್ಲಿ ಅರುಣಚೇತನದ ಶಾಲೆಗಳಿವೆ. ಶಿರಸಿಯಲ್ಲಿ ಅಜಿತ್ ಮನೋ ಚೇತನ ಶಾಲೆಯು ಕೆಲಸಮಾಡುತ್ತಿವೆ. ಕೋರಮಂಗಲದಲ್ಲಿ ಸೇವಾ–ಇನ್–ಆ್ಯಕ್ಷನ್‌ನ ಕೇಂದ್ರ ಕಛೇರಿ ಇದೆ. ಶಿರಸಿಯಲ್ಲಿ ಅಜಿತ ಮನೋಚೇತನದ ವಿಕಾಸ–ವಿಶೇಷ ಶಾಲೆಯು ಕೆಲಸಮಾಡುತ್ತಿದೆ.

ಲಾಭಾನ್ವಿತರು

| | |
|---|---|
| ಅರುಣ ಚೇತನಾ | 180 |
| ಕೌಶಲ್ಯ ತರಬೇತಿ ಕೇಂದ್ರ (ಅರುಣಚೇತನಾ) | 40 |
| ಮನೋನಂದನ | 60 |
| ಅಜಿತ್ ಮನೋಚೇತನಾ | 23 |

ಸೇವಾ ಇನ್ ಆಕ್ಷನ್ – ನೇರ ಸೇವೆ – 3 ಜಿಲ್ಲೆಗಳು
(ಬೆಂಗಳೂರು ಮಹಾನಗರ, ಗ್ರಾಮಾಂತರ ಜಿಲ್ಲೆ ಹಾಗೂ ರಾಮನಗರ ಜಿಲ್ಲೆ)
ಫಲಾನುಭವಿಗಳು: 300
ಪರೋಕ್ಷ ಸೇವೆ: ಕರ್ನಾಟಕದ ಎಲ್ಲ 30 ಜಿಲ್ಲೆಗಳು – ಫಲಾನುಭವಿಗಳು 2,000.

ವಿಶೇಷ ಚಿಕಿತ್ಸೆಗಳು:–

* ಫಿಸಿಯೋ ಥೆರಪಿ
* ಸ್ಪೀಚ್ ಅಂಡ್ ಹಿಯರಿಂಗ್ ಥೆರಪಿ
* ವಿಝನ್ ಥೆರಪಿ.



ಅರುಣಚೇತನ ಮಕ್ಕಳ ವಾದ್ಯಗೋಷ್ಠಿ



ಪೂ. ಪೇಜಾವರ ಶ್ರೀಗಳು ಅರುಣಚೇತನದಲ್ಲಿ

ಉಜಿರರೆ ಕಾಲೇಜಿನ ನಾಲ್ಕು ಸ್ನಾತಕೋತ್ತರ ಮನಶಾಸ್ತ್ರದ ವಿದ್ಯಾರ್ಥಿಗಳು 'ವಿಕಾಸ' ವಿಶೇಷ ಶಾಲೆಯನ್ನು ಒಂದು ತಿಂಗಳಕಾಲ ಸಮೀಕ್ಷೆ ಮಾಡಿ ಅಜಿತ ಮನೋಚೇತನಾ ಸಂಸ್ಥೆಯ ಶಿರಸಿ ಹಾಗೂ ಸುತ್ತಮುತ್ತಲಿನ ತಾಲ್ಲೂಕುಗಳ ಜನತೆಗೆ ವಿಶೇಷ ಶಿಕ್ಷಣ ಹಾಗೂ ಆರೋಗ್ಯ ಸೇವೆ ನೀಡುತ್ತಿದೆ ಎಂದು ಮಂಗಳೂರು ವಿಶ್ವ ವಿದ್ಯಾಲಯಕ್ಕೆ ವರದಿ ನೀಡಿದ್ದಾರೆ.



**ಸೇವಾ ಇನ್ ಆಕ್ಷನ್**:

- ಸರ್ಕಾರಿ ಹಾಗೂ ಖಾಸಗಿ ವಿಶೇಷ ಮಕ್ಕಳ ಶಾಲೆಗಳ ವಿಕಲ ಚೇತನ ಮಕ್ಕಳಿಗೆ ರಸಪ್ರಶ್ನೆ ನಡೆಸಲಾಯಿತು. 37 ಶಾಲೆಗಳಿಂದ 300 ಮಕ್ಕಳು ಭಾಗವಹಿಸಿದ್ದರು.
- ಹೊಸಕೋಟೆಯಲ್ಲಿ ವಿಕಲ ಚೇತನ ಮಕ್ಕಳಿಗಾಗಿ 3 ದಿನಗಳ ಸಾಂಸ್ಕೃತಿಕ ಕಲಾ ಮೇಳವನ್ನು ಆಯೋಜಿಸಲಾಗಿತ್ತು. 15 ವಿಶೇಷ ಶಾಲೆಗಳ 150 ಮಕ್ಕಳು ಭಾಗವಹಿಸಿದ್ದರು.
- ಕೋರಮಂಗಲದ ಸುತ್ತಮುತ್ತಲಿನ ದೇವಸ್ಥಾನಗಳಿಂದ ಉಪಯೋಗಿಸಿ ಹೂವುಗಳನ್ನು ಸಂಗ್ರಹಿಸಿ ಅವುಗಳಿಂದ ರಂಗವಲ್ಲಿ ಬಣ್ಣ, ಹೋಳಿ ಬಣ್ಣ ಹಾಗೂ ಅಗರಬತ್ತಿ ತಯಾರಿಸುವ ತರಬೇತಿಯನ್ನು ವಯಸ್ಕ ಬುದ್ಧಿಮಾಂದ್ಯ ಮಕ್ಕಳಿಗೆ ಕೊಡಲಾಗಿದೆ. ಅದರಿಂದ ಪರಿಸರಕ್ಕೂ, ಸಂಸ್ಥೆಗೂ ಲಾಭವಾಗಿದೆ.



ಹೂವುಗಳಿಂದ ಬಣ್ಣ ಹಾಗೂ ಅಗರಬತ್ತಿ ತಯಾರಿಕೆ



ಮಕ್ಕಳಿಗೆ ಚಟುವಟಿಕೆ




ಮನೋನಂದನ : 'ತೆರೆದ ಮನೆ' ಕಾರ್ಯಕ್ರಮ

ಮನೋನಂದನ : ತೆರೆದ ಮನೆ 'ಕಾರ್ಯಕ್ರಮ 2016ರ ಮಾರ್ಚ 5 ಮತ್ತು 6ರಂದು ಮಾನಸಿಕ ಮಕ್ಕಳ ತೊಂದರೆಗಳಂದ ಬಾಧಿತರಾದ ಮಕ್ಕಳ ಬಗ್ಗೆ ಪಾಕರಿಗೂ, ಸಮಾಜಕ್ಕೂ ಸರಿಯಾದ ತಿಳುವಳಿಕೆ ಕೊಡುವುದಕ್ಕಾಗಿ ತೆರೆದಮನೆ ಎಂಬ ಕಾರ್ಯಕ್ರಮ ನಡೆಸಲಾಯಿತು. ಅ ಸಮಯದಲ್ಲಿ ಮಾನಸಿಕ ಸಮಸ್ಯೆಗಳ ವಿವಿಧ ರೀತಿಗಳನ್ನು ಪರಿಚಯಿಸಲಾಯಿತು. ಆಯಾ ಸಮಸ್ಯೆಗಳಿಗೆ ಯಾವ ರೀತಿ ಚಿಕಿತ್ಸೆ ನೀಡಲಾಗುತ್ತಿದೆ ಎಂಬುದನ್ನು ತಿಳಿಸಲಾಯಿತಲ್ಲದೆ ಆ ಸಮಸ್ಯೆಗಳಿದ್ದರೂ ಅದನ್ನು ಮೀರಿ ವಿಖ್ಯಾತರಾದ ಅನೇಕ ಪ್ರಮುಖರ ಚಿತ್ರಗಳನ್ನು ಅಲ್ಲಿ ಹಾಕಲಾಗಿತ್ತು. ಕಲಿಕೆಗೆ ಸಹಾಕ ವಸ್ತುಗಳನ್ನು ಪ್ರದರ್ಶಿಸಲಾಗಿತ್ತು. ಬಂದವರೆಲ್ಲಾ ಪ್ರಭಾವಿತರಾದರು. ಅನೇಕರು ಉದಾರವಾಗಿ ದೇಣಿಗೆಯನ್ನು ನೀಡಿದರು.

# ಪ್ರಸನ್ನ ಆಪ್ತ ಸಲಹಾಕೇಂದ್ರ

(ಅಜಿತಶ್ರೀ ಕೇಂದ್ರ)

ಪ್ರಸನ್ನ ಆಪ್ತಸಲಹಾಕೇಂದ್ರ (ಬಸವನಗುಡಿ ರಸ್ತೆ) ದಿಂದ ಈ ವರ್ಷದಲ್ಲಿ

| **ನೀಡಿದ ಚಿಕಿತ್ಸೆಯ ವಿವರಗಳು** | |
|---|---|
| ಶಾರೀರಿಕ | 29 |
| ಮಾನಸಿಕ | 688 |
| ವೈವಾಹಿಕ | 33 |
| ಆತ್ಮಹತ್ಯೆಯ ಭಾವ | 0 |
| ಮಧ್ಯಸೇವನೆ | 20 |
| ಮನೆಯಲ್ಲಿ ಕಿರುಕುಳ | 92 |
| ಶೈಕ್ಷಣಿಕ | 111 |
| ಕಿಶೋರಾವಸ್ಥೆಯ ಸಮಸ್ಯೆಗಳು ಹಾಗೂ ಅನ್ಯ | 5 |
| ಒಟ್ಟು | 978 |

ಪ್ರಸನ್ನ ಆಪ್ತ ಸಲಹಾಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಮುಖರು ಶ್ರೀಮತಿ ಎಂ.ಸಿ.ಪಂಕಜ, ಡಾ॥ ಸಿ.ಆರ್. ಚಂದ್ರಶೇಖರ್. ಡಾ॥ರವಿ, ಡಾ॥ ಶಂಕರ್. ಇವರಿಗೆ ಸಹಾಯಕರಾಗಿ ಸುಮಾರು 50 ಆಪ್ತಸಲಹಾಕಾರರು ಇದ್ದಾರೆ.



ಮುಖ್ಯಮಂತ್ರಿಗಳಿಂದ ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸುತ್ತಿರುವ ಶ್ರೀಮತಿ ಎಂ.ಸಿ.ಪಂಕಜ

ಪ್ರತಿಷ್ಠಿತ ಬೆಂಗಳೂರು, ತುಮಕೂರು, ಕುವೆಂಪು, ಕ್ರೈಸ್ಟ್, ಜೈನ್ ವಿಶ್ವವಿದ್ಯಾಲಯಗಳಿಂದ ಮನಶಾಸ್ತ್ರದ ವಿದ್ಯಾರ್ಥಿಗಳು ಪ್ರಾಯೋಗಿಕ ಅಭ್ಯಾಸಕ್ಕಾಗಿ ಪ್ರ. ಆ. ಸಲಹಾಕೇಂದ್ರಕ್ಕೆ ಬಂದು ಅನುಭವ ಗಳಿಸುತ್ತಾರೆ. 2015–16ರಲ್ಲಿ ಆ ರೀತಿ ಬಂದ ವಿದ್ಯಾರ್ಥಿಗಳ ಸಂಖ್ಯೆ 25.



ಹೊಸ ಆಪ್ತಸಲಕಾರರಿಗೆ ತರಬೇತಿ ವರ್ಗ

ವರ್ಷಕ್ಕೊಮ್ಮೆ ಆಪ್ತಸಲಹೆಗಾರರಾಗುವವರಿಗೆ ಆರು ತಿಂಗಳ ಕೋರ್ಸ್ ನಡೆಸಲಾಗುತ್ತಿದೆ. ಕಳೆದ ಜನವರಿಯಲ್ಲಿ ಅಜಿತಶ್ರೀಯಲ್ಲಿ ನಡೆದ ತರಬೇತಿ ವರ್ಗದಲ್ಲಿ ಭಾಗವಹಿಸಿದವರ ಸಂಖ್ಯೆ 97.

ಮಲೇಶ್ವರಂನಲ್ಲಿ ಪ್ರಸನ್ನ ಆಪ್ತಸಲಹಾಕೇಂದ್ರದ ಒಂದು ಶಾಖೆ ಕೆಲಸ ಮಾಡುತ್ತಿದೆ. ಇಲ್ಲಿಜೂನ್ ತಿಂಗಳಿನಿಂದ ನಡೆಯುತ್ತಿರುವ ತರಬೇತಿ ವರ್ಗದಲ್ಲಿ ಭಾಗವಹಿಸುತ್ತಿರುವವರ ಸಂಖ್ಯೆ 48.

ಮಲ್ಲೇಶ್ವರಂನಲ್ಲಿ ಆಪ್ತ ಸಲಹಾಕೇಂದ್ರದ ಉಪಯೋಗ ಪಡೆದವರು ಸುಮಾರು 50 ಜನ. ಇಲ್ಲಿನ ಮೂರು ಸಲಹೆಗಾರರು ನಿಯಮಿತವಾಗಿ ಸುತ್ತಮುತ್ತಲಿನ ವಿದ್ಯಾಲಯಗಳು ಹಾಗೂ ವಿದ್ಯಾರ್ಥಿನಿಲಯಗಳಿಗೆ ಹೋಗಿ ಆಪ್ತಸಲಹೆ ನೀಡುತ್ತಾರೆ.

## ಮಕ್ಕಳ ಮಾರ್ಗದರ್ಶಿ ಕೇಂದ್ರ



ಮಕ್ಕಳ ಮಾರ್ಗದರ್ಶಿಕೇಂದ್ರವು ಡಾ॥ ಮಾಳವಿಕಾ ಕಪೂರ್ ಹಾಗೂ ಶ್ರೀಮತಿ ಗೀತಾ ಅವರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದೆ. ಅವರಿಗೆ ಸಹಕಾರಿಗಳಾಗಿ 12 ಆಪ್ತಸಲಹೆಗಾರ್ತಿಯರಿದ್ದಾರೆ.

2015–16ರಲ್ಲಿ ಇವರ ಸದುಪಯೋಗ ಪಡೆದುಕೊಂಡವರು.

ಗಂಡುಮಕ್ಕಳು 187 ಹೆಣ್ಣುಮಕ್ಕಳು 77 ಒಟ್ಟು 264

ಚಿಕಿತ್ಸೆ ಮಾಡಿದ ಮಾನಸಿಕ ಅಸ್ವಸ್ಥತೆಯ ಪ್ರಕಾರಗಳು.

| | |
|---|---|
| ಎಡಿಹೆಚ್‌ಡಿ | 26 |
| ಹಾಸಿಗೆ ಒದ್ದೆ ಮಡುವವರು | 10 |
| ಸ್ವಭಾವ ದೇಶ | 33 |
| ಬೆಳವಣಿಗೆಯಲ್ಲಿ ನ್ಯೂನತೆ | 3 |
| ಭಾವನೆಗಳಲ್ಲಿ ದೋಷ | 95 |
| ವಾಕ್ ಶ್ರವಣ ಸಮಸ್ಯೆ | 4 |
| ಕಲಿಯುವುದರಲ್ಲಿ ಅಶಕ್ತತೆ | 108 |
| ಶಾಲೆ ಬಿಟ್ಟವರು | 2 |
| ಮಾನಸಿಕ ಸಮಸ್ಯೆ | 4 |
| ಅನ್ಯಸಮಸ್ಯೆ | 28 |
| ಸಮಸ್ಯೆಗಳಿಲ್ಲದ ಮಕ್ಕಳು | 18 |
| | 331 |

* ಕೆಲವು ಮಕ್ಕಳಲ್ಲಿ 2–3 ವಿಧದ ಸಮಸ್ಯೆಗಳೂ ಇದ್ದವು.

ಒಂದೇ ಮಗುವಿನಲ್ಲಿ ಹಲವು ರೀತಿಯ ಸಮಸ್ಯೆಗಳಿದ್ದಲ್ಲಿ ಮುಖ್ಯ ಸಮಸ್ಯೆಯನ್ನು ಅರಿತು ಅದಕ್ಕೆ ಮೊದಲು ಚಿಕಿತ್ಸೆ ನೀಡಲಾಗುತ್ತದೆ. ಮಕ್ಕಳ ಮಾನಸಿಕತೆಯನ್ನು ತಿಳಿದುಕೊಳ್ಳಲಾಗುತ್ತದೆ. ಎಲ್ಲ ತರಹದ ಸಮಸ್ಯೆಗಳಿಗೂ ಆಪ್ತ ಸಲಹೆಯನ್ನು ಆಯಾ ವಿಭಾಗದ ತಜ್ಞರೇ ಕೊಡುತ್ತಾರೆ. ಕೆಲವು ಸಮಸ್ಯೆಗಳನ್ನು ನಿಮ್ಹಾನ್ಸ್‌ನಂತಹ ಸಂಸ್ಥೆಗೆ ವರ್ಗಾಯಿಸಲಾಗುತ್ತದೆ.

ಕಾರ್ಯಕರ್ತರ ಸ್ತರವರ್ಧನೆಗಾಗಿ ಪ್ರತಿ ತಿಂಗಳ ಕೊನೆಯ ಶನಿವಾರ ವಿಶೇಷ ಉಪನ್ಯಾಸ ಏರ್ಪಡಿಸಲಾಗುತ್ತಿದೆ.

# ಅನ್ಯ ಚಟುವಟಿಕೆಗಳು

ಪ್ರಾಂತದಲ್ಲಿ ಅನ್ಯಾನ್ಯ ಸಂಸ್ಥೆಗಳಲ್ಲಿ ಕಾರ್ಯಕರ್ತರಾಗಿರುವ ಸೇವಾವ್ರತಿಗಳು, ಪೂರ್ವಸೇವಾವ್ರತಿಗಳು ಹಾಗೂ ಸಮಗ್ರ ಶಿಶುಶಿಕ್ಷಣಕ್ಕೊಳಪಟ್ಟ ಶಿಶುಮಂದಿರಗಳ ಮಾತಾಜಿಗಳು ನಡೆಸುತ್ತಿರುವ ಅನ್ಯಾನ್ಯ ಚಟುವಟಿಕೆಗಳು ಈ ರೀತಿಯಾಗಿವೆ.

| | |
|---|---|
| ಬಾಲಗೋಕುಲ | ೮2 |
| ಕಿಶೋರಭಾರತಿ | 4 |
| ಜೋಳಿಗೆ ಪುಸ್ತಕಾಲಯ | 2 |
| ಮಾತೃಮಂಡಳಿ | 41 |
| ಸ್ವಾವಲಂಬನೆ | 4 |
| ಸ್ವಸಹಾಯಸಂಘ | 5 |
| ಯೋಗ | 4 |
| | 151 |



ಕಿನ್ಯಾದಲ್ಲಿ ವರಮಹಾಲಕ್ಷ್ಮೀ ಹಬ್ಬದ ಸಂಭ್ರಮ

ವಿಶೇಷಗಳು:

ಕಿನ್ಯ ಶಿಶುಮಂದಿರದ ಕಡೆಯಿಂದ ನಡೆಯುವ ವರಮಹಾಲಕ್ಷ್ಮೀಪೂಜೆಗೆ ಮಾತೃ ಮಂಡಳಿಯ ಸದಸ್ಯೆಯರೇ ಎಲ್ಲ ಮನೆಗಳ ಸಂಪರ್ಕ ಹಾಗೂ ವ್ಯವಸ್ಥೆಗಳನ್ನು ನಡೆಸುತ್ತಾರೆ.

ಕಿನ್ಯ ಶಿಶುಮಂದಿರದ ವಾರ್ಷಿಕೋತ್ಸವವು ಊರಿನ ಪ್ರಮುಖ ಕಾರ್ಯಕ್ರಮವಾಗಿದ್ದು ೬೦೦-೮೦೦ ಸಾರ್ವಜನಿಕರು ಸೇರುತ್ತಾರೆ. ವಾರ್ಷಿಕೋತ್ಸವದಲ್ಲಿ ಬಾಲಗೋಕುಲದ ಮಕ್ಕಳು ಯಕ್ಷಗಾನವನ್ನು ಪ್ರದರ್ಶಿಸಿದ್ದಾರೆ.

ಕಾಟಿಪಳ್ಳದ ಕೇಶವ ಶಿಶುಮಂದಿರದ ಮಾತೃಮಂಡಳಿ ಕಾರ್ಯಕರ್ತರು ನಡೆಸುವ ವರಮಹಾಲಕ್ಷ್ಮಿ ಪೂಜೆಗೂ 2೦೦೦ಕ್ಕೂ ಹೆಚ್ಚು ಮಹಿಳೆಯರು ಬರುತ್ತಾರೆ.

ಶ್ರೀ ಕೃಷ್ಣಜನ್ಮಾಷ್ಟಮಿ ಕಾರ್ಯಕ್ರಮ ಎಲ್ಲ ಬಾಲಗೋಕುಲಗಳಲ್ಲೂ ಊರವರ ಸಹಕಾರದಿಂದ ಅದ್ದೂರಿಯಾಗಿ ನಡೆಯುತ್ತದೆ.

# 10. ಸೇವಾವ್ರತಿಗಳು



**ತರಬೇತಿ ಶಿಬಿರದಲ್ಲಿ ಸೇವಾವ್ರತಿಗಳು**

ಸೇವೆಯನ್ನು ವ್ರತವಾಗಿ ಸ್ವೀಕರಿಸಿ ತಮ್ಮ ಯೌವ್ವನದ ಅಮೂಲ್ಯವಾದ ಕೆಲವು ವರ್ಷಗಳನ್ನು ಸಮಾಜ ಸೇವೆಯಲ್ಲಿ ತೊಡಗಿಸಿದವರೇ ಸೇವಾವ್ರತಿಗಳು.
ಹಿಂದು ಸೇವಾ ಪ್ರತಿಷ್ಠಾನದ ಕಾರ್ಯದ ಆರಂಭವೇ ಸೇವಾವ್ರತಿಗಳ ತರಬೇತಿಯೊಂದಿಗೆ, ಈವರೆಗೂ ಬಂದಿರುವ ಸೇವಾವ್ರತಿಗಳ ಸಂಖ್ಯೆ 4500 ಕ್ಕೂ ಅಧಿಕ
ಅದರಲ್ಲಿ ಶೇ.90ರಷ್ಟು ಮಹಿಳೆಯರೇ ಬಂದಿದ್ದಾರೆ. ಸಮಾಜದ ಎಲ್ಲ ವರ್ಗಗಳಿಂದಲೂ ಕರ್ನಾಟಕದ ಎಲ್ಲ ಜಿಲ್ಲೆಗಳಿಂದಲೂ ಸೇವಾವ್ರತಿಗಳು ಬಂದಿದ್ದಾರೆ.

**ಸೇವಾವ್ರತಿಗಳ ಕಾರ್ಯ(ಭೌಗೋಳಿಕವಾಗಿ)**

ಕರ್ನಾಟಕದ ಎಲ್ಲ ಜಿಲ್ಲೆ, ತಾಲ್ಲೂಕು ಬಹುಶಃ ಎಲ್ಲ ಹೋಬಳಿಗಳಲ್ಲಿ. ಕೇರಳ, ತಮಿಳುನಾಡು, ಆಂಧ್ರ, ಅಸ್ಸಾಂ, ಮಣಿಪುರ, ಅರುಣಾಚಲ ಪ್ರದೇಶಗಳಲ್ಲಿ. ಸಂಸ್ಕೃತಭಾರತಿಯ ಮೂಲಕ–ದೆಹಲಿ, ಉತ್ತರಪ್ರದೇಶ, ರಾಜಸ್ಥಾನ, ಮಧ್ಯಪ್ರದೇಶಗಳಲ್ಲಿ.

**ಕಾರ್ಯವೈವಿಧ್ಯ**

ಶಿಶುಮಂದಿರಗಳಲ್ಲಿ ಮಾತಾಜಿಯರಾಗಿ.
ಆಸ್ಪತ್ರೆಗಳಲ್ಲಿ ದಾದಿಯರಾಗಿ,
ಕಾರ್ಯಾಲಯಗಳಲ್ಲಿ ಸಹಾಯಕಿರಾಗಿ
ಯೋಗ ಶಿಕ್ಷಕಿಯರಾಗಿ
ಬುದ್ಧಿಮಾಂದ್ಯ, ಅಂಗವಿಕಲ ಮಕ್ಕಳ ಶಾಲೆಯಲ್ಲಿ ಶಿಕ್ಷಕಿಯರಾಗಿ
ಬಾಲಸಂರಕ್ಷಣಾ ಕೇಂದ್ರಗಳಲ್ಲಿ
ರಾಷ್ಟ್ರ ಸೇವಿಕಾ ಸಮಿತಿಯಲ್ಲಿ
ಗ್ರಾಮವಿಕಾಸದ ಕಾರ್ಯದಲ್ಲಿ
ಭಿಕ್ಷುಕರ ಕಾಲೋನಿಗಳಲ್ಲಿ
ಸೇವಾಬಸ್ತಿಗಳಲ್ಲಿ
ನಕ್ಸಲ್ ಪೀಡಿತ ಪ್ರದೇಶಗಳಲ್ಲಿ
ವನವಾಸಿ ಕ್ಷೇತ್ರಗಳಲ್ಲಿ
ಸಂಸ್ಕೃತ ವಿಭಾಗದಲ್ಲಿ

| | |
|---|---|
| 2015–16ರಲ್ಲಿ ಬಂದ ಸೇವಾವ್ರತಿಗಳು | 29 |
| 2016ರ ಮೇ ನಂತರ ಬಂದ ಸೇವಾವ್ರತಿಗಳು | 24 |

**ಹಿಂದು ಸೇವಾ ಪ್ರತಿಷ್ಠಾನ**
ಅಜಿತಶ್ರೀ, 8/28, ಬಸವನಗುಡಿ ರಸ್ತೆ, ಬೆಂಗಳೂರು – 560 004
ದೂರವಾಣಿ: 080–26608926, 22425337
ಇ–ಮೇಲ್: hinduseva@gmail.com
ವೆಬ್‌ಸೈಟ್: www.hinduseva.org